ಇಲಾಖೆ–15, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ–3, ಕೆರೆಗಳ ಅಭಿವೃದ್ಧಿ ಪ್ರಾಧಿಕಾರ–3, ಬೆಂಗಳೂರು ಮಹಾನಗರ ಪಾಲಿಕೆ–5 ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ.

26(133) ಶ್ರೀ ಅಶೋಕ್ ಆರ್. : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಗೆಡದೆ ಕೊನೇನಹಳ್ಳಿ ಗ್ರಾಮದಲ್ಲಿನ ಸರ್ವೆ ನಂ.38, 39 ರಲ್ಲಿ 94ಸಿ ಅನ್ವಯ ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಅಲ್ಲಿನ ನಿವಾಸಿಗಳು ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಬೆಂಗಳೂರಿನಲ್ಲಿ ಇದುವರೆವಿಗೆ ಎಷ್ಟು ಅರ್ಜಿಗಳು ಬಂದಿರುತ್ತವೆ;

ಇ) ಅಕ್ರಮ ಸಕ್ರಮ ಯೋಜನೆಯಲ್ಲಿ 94ರ ಸಿ ಅನ್ವಯ ಅರ್ಜಿ ಸಲ್ಲಿಸಿರುವವರಿಗೆ ಹಕ್ಕುಪತ್ರ ವಿತರಣೆ ಮಾಡಲಾಗಿದಿಯೇ;

ಈ) ಇಲ್ಲದಿದ್ದಲ್ಲಿ ಯಾವಾಗ ವಿತರಣೆ ಮಾಡಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಒಟ್ಟು 42,968 ಅರ್ಜಿಗಳು ಸ್ವೀಕೃತವಾಗಿರುತ್ತವೆ.

ಇ) ಅರ್ಜಿಗಳ ಕುರಿತು ಸದರಿ ಅರ್ಜಿಗಳನ್ನು ಪರಿಶೀಲಿಸಿ ಅಂತಿಮ ಮಾದಿ ಸಲ್ಲಿಸುವುದಕ್ಕಾಗಿ ತಾಲ್ಲೂಕಿಗೆ ಒಬ್ಬರಂತೆ ಉಪವಿಭಾಗಾಧಿಕಾರಿಗಳ ಹುದ್ದೆಯ ಅಧಿಕಾರಿಗಳನ್ನು ನೋಡೆಲ್ ಅಧಿಕಾರಿಗಳೆಂದು ನೇಮಕ ಮಾಡಲಾಗಿದೆ. ಇವುಗಳಲ್ಲಿ 640 ಪ್ರಕರಣಗಳಲ್ಲಿ ನಿವೇಶನದ ಕಿಮ್ಮತ್ತು ಪಾವತಿಸಲು ತಾತ್ಕಾಲಿಕ ಆದೇಶ ನೀಡಲಾಗಿದೆ.

ಈ) ಇನ್ನುಳಿದ ಅರ್ಜಿಗಳ ಕಡತ ತಯಾರಿಕೆ ವಿವಿಧ ಹಂತದಲ್ಲಿದ್ದು ಸರ್ಕಾರ ನಿಗದಿಪಡಿಸಿದ ದಿನಾಂಕ:09.03.2005ರ ಒಳಗಾಗಿ ಅರ್ಹ ಅರ್ಜಿದಾರರಿಗೆ ಹಕ್ಕುಪತ್ರ ನೀಡಲು ಕ್ರಮ ಕೈಗೊಳ್ಳಲಾಗುವುದು.

27(303) ಶ್ರೀ ಬಸವಣ್ಣೆಪ್ಪ . ಜಿ (ಹೊಳೆ ಹೊನ್ನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಕರಾವಳಿ ತೀರದಲ್ಲಿ ಸುನಾಮಿ ಅಲೆಯು ತೀವ್ರವಾಗಿ ಎರಗಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಯಾವಾಗ ಮತ್ತು ಎಲ್ಲೆಲ್ಲಿ; ಇದರ ಅನಾಹುತ ಉಂಟಾಗಿದೆ;

ಇ) ಇದರಿಂದಾಗಿ ಉಂಟಾಗಿರುವ ಜೀವ ಹಾನಿ ಹಾಗೂ ಆಸ್ತಿ ಹಾನಿ ಎಷ್ಟು;

ಈ) ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಪರಿಹಾರ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಹೌದು. ಆದರೆ ತೀವ್ರವಾಗಿರುವುದಿಲ್ಲ.

ಆ) ದಿನಾಂಕ 26.12.2004ರಂದು ಈ ಕೆಳಕಂಡ ಜಿಲ್ಲೆಗಳಲ್ಲಿನ ಪ್ರದೇಶದಲ್ಲಿ ಅನಾಹುತ ಉಂಟಾಗಿದೆ.

ಅ) ಉತ್ತರಕನ್ನಡ ಜಿಲ್ಲೆ–ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ ಹಾಗೂ ಭಟ್ಕಳ ತಾಲ್ಲೂಕು

ಆ) ದ. ಕನ್ನಡ ಜಿಲ್ಲೆ– ಉಳ್ಳಾಲ, ಬೆಂಗ್ರೆ ಮತ್ತು ಮುಕ್ಕದ ಕಡಲತೀರ.

ಇ) ಉಡುಪಿ ಜಿಲ್ಲೆ– ಕುಂದಾಪುರ ತಾಲ್ಲೂಕು ಬಿಜಾಡಿ ಗ್ರಾಮ, ಉಡುಪಿ ತಾಲ್ಲೂಕು

ಇ) ಅ) ಒಟ್ಟು 3 ಜನರು ಪ್ರಾಣ ಕಳೆದುಕೊಂಡಿದ್ದಾರೆ.

ಆ) ಆಸ್ತಿಪಾಸ್ತಿ ಈ ಕೆಳಗಿನಂತೆ ಹಾನಿಯಾಗಿದೆ.

		(ರೂ. ಲಕ್ಷಗಳಲ್ಲಿ)
1) ಉ. ಕನ್ನಡ ಜಿಲ್ಲೆ	–	311.918
2) ಉಡುಪಿ ಜಿಲ್ಲೆ	–	440.034
3) ದ. ಕನ್ನಡ ಜಿಲ್ಲೆ	–	009.060
ಒಟ್ಟು	–	761.012

ಈ) ಜೀವಹಾನಿಗೊಳಗಾದ ಸಂತ್ರಸ್ಥರ ವಾರಸುದಾರರಿಗೆ ತಲಾ ಒಂದು ಲಕ್ಷ ಪರಿಹಾರ (Exgratia) ನೀಡಲಾಗಿದೆ. ಆಸ್ತಿಪಾಸ್ತಿ ಹಾನಿ ಬಗ್ಗೆ ಪರಿಹಾರ ನೀಡುವ ಕುರಿತು ಸರ್ಕಾರದ ಪರಿಶೀಲನೆಯಲ್ಲಿದೆ.

28(77) ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದ ಗ್ರಾಮಾಂತರ ಪ್ರದೇಶದ ಕೆಲವು ಭಾಗಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಎಲ್ಲೆಲ್ಲಿ ಇಂತಹ ಪ್ರಕರಣಗಳು ಜರುಗಿವೆ; (ಉದಾ: ಕರಡಿ, ಚಿರತೆ, ತೋಳ ಇನ್ನಿತರೆ ಕ್ರೂರ ಕಾಡು ಪ್ರಾಣಿಗಳ ನಿಗ್ರಹಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ);

ಇ) ಇಂತಹ ಪ್ರಕರಣಗಳಲ್ಲಿ ಗಾಯಗೊಂಡ, ಸಾವಿಗೀಡಾದ ಜನರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಈ) ಇತ್ತೀಚೆಗೆ ಹಾಸನ ಜಿಲ್ಲೆಯ ಕೆಲವು ತಾಲ್ಲೂಕು ಭಾಗಗಳಲ್ಲಿ ಕರಡಿ ಕಡಿತದ ಪ್ರಕರಣಗಳು ಬೆಳಕಿಗೆ ಬಂದಿರುವುದು ನಿಜವೇ; ಇದರಿಂದುಂಟಾದ ಸಾವು ನೋವಿನ ಸಂಖ್ಯೆ ಎಷ್ಟು;

ಉ) ಕಡಿತಕ್ಕೊಳಗಾದವರಿಗೆ, ಹಾಗೂ ಸಾವಿಗೀಡಾದವರಿಗೆ ಸೂಕ್ತ ಪರಿಹಾರವನ್ನು ಸರ್ಕಾರ ನೀಡಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು;

ಊ) ಇಂತಹ ಪ್ರಕರಣಗಳು ಮರುಕಳಿಸದಂತೆ ತಡೆಗಟ್ಟಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ರಾಜ್ಯದಲ್ಲಿಯ ಎಲ್ಲಾ ಅರಣ್ಯ ವೃತ್ತಗಳ ವ್ಯಾಪ್ತಿಯಲ್ಲಿ ಕಾಡು ಪ್ರಾಣಿ ಹಾವಳಿ ಆದ ಬಗ್ಗೆ ವರದಿಯಾಗಿರುತ್ತದೆ.

ಕರಡಿ ಚಿರತೆ, ತೋಳ ಇಂತಹ ಪ್ರಾಣಿಗಳ ಹಾವಳಿಯನ್ನು ತಪ್ಪಿಸಲು ಶಾಶ್ವತ ಪರಿಹಾರ ಕ್ರಮಗಳನ್ನು ಅಳವಡಿಸಿಕೊಂಡಿರುವುದಿಲ್ಲ. ಆದರೆ ಇಂತಹ ಘಟನೆಗಳು ಸಂಭವಿಸಿದಲ್ಲಿ ಸ್ಥಳೀಯ ಅರಣ್ಯಾಧಿಕಾರಿಗಳಿಂದ ಪರಿಹಾರ ಕ್ರಮಗಳು ಅಂದರೆ ಪ್ರಾಣಿಗಳನ್ನು ಹಿಡಿದು ಸ್ಥಳಾಂತರಿಸುವುದು, ಕಾಡಿಗೆ ಓಡಿಸುವುದು ಘಟನೆಗಳು ಮರುಕಳಿಸದಂತೆ ನಿರ್ದಿಷ್ಟ ಪ್ರದೇಶದಲ್ಲಿ ಕಾವಲುಗಾರರನ್ನು ನೇಮಿಸುವುದು ಮುಂತಾದ ಕ್ರಮಗಳಿಂದ ಪ್ರಾಣಿಗಳ ಹಾವಳಿಯನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿದೆ.